- -                    ಓ ಎಸ್ ನಂ.65/2020

ಪಿ.ಡಬ್ಲ್ಯೂ :1

ದಿನಾಂಕ : 11-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಎಂ ಎಸ್ ಎನ್ ವಕೀಲರಿಂದಃ</u>

ತೊಡೆಕೊಪ್ಪ- ಹೂವಿನ ಕೆರೆ ರಸ್ತೆ ಹಲವು ವರ್ಷಗಳ ಹಳೆಯ ರಸ್ತೆ ಎಂದರೆ ಗೊತ್ತಿಲ್ಲ . ಸರ್ವೆ ನಂ. 162 ರಲ್ಲಿ 20 ಗುಂಟೆ ಸ್ವತ್ತು ರಸ್ತೆಗೆ ಹೋಗುತ್ತದೆ ಎಂದರೆ ಸರಿಯಲ್ಲ . ಸದರಿ ಸರ್ವೆ ನಂಬರ್ ನಲ್ಲಿ 5 ಎಕರೆ 10 ಗುಂಟೆ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿಗೆ ಬಂದಿದ್ದ ಭಾಗದ ಸ್ವತ್ತಿಗಿಂತ 10 ಗುಂಟೆ ಕಡಿಮೆ ವಿಸ್ತೀರ್ಣದ ಸ್ವತ್ತಿನಲ್ಲಿ ಅವರು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ . ವಾದಿಗಳ ತಂದೆ ಗುಡ್ಡಯ್ಯ 1 ನೇ ಪ್ರತಿವಾದಿಯ ತಂದೆ ಬೋರಜೋಗಯ್ಯ ರವರು ಮೌಖಿಕವಾಗಿ ಸ್ವತ್ತುಗಳನ್ನು ವಿಭಾಗಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ . ದಿಃ 14-06-1990 ರಂದು ನನ್ನ ಅಣ್ಣ ಜಯರಂಗಪ್ಪ , ರಂಗಪ್ಪ ಮತ್ತು ಸಿದ್ದಯ್ಯ ರವರು ಸ್ವತ್ತುಗಳನ್ನು ವಿಭಾಗಿಸಿಕೊಂಡಿದ್ದಾರೆ ಎಂದರೆ ಸರಿ . ಮೇಲೆ ಹೇಳಿದಂತೆ ಮೌಖಿಕ ವಿಭಾಗ ಹಾಗೂ ದಿಃ 14-06-1990 ರ ವಿಭಾಗದ ಪ್ರಕಾರ ಅವರವರು ಪ್ರತ್ಯೇಕ ಸ್ವಾಧೀನ ಹೊಂದಿದ್ದಾರೆ ಎಂದರೆ ನಾವು 2 ಎಕರೆ 28 ಗುಂಟೆ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದೇವೆ ಎಂದು ತಿಳಿಸಿದ್ದಾರೆ . ಹಲವು ವರ್ಷಗಳು 1 ನೇ ಪ್ರತಿವಾದಿಯು ಅವರ ಭಾಗದ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದರೂ ಸಹಾ ಅವರ ವಿರುದ್ಧ ದೂರು ನೀಡಿ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ , ಅವರೇ ನಮ್ಮ ಸ್ವತ್ತನ್ನು ಅತಿಕ್ರಮಿಸುತ್ತಾ ಬರುತ್ತಿದ್ದಾರೆ ಎಂದು ಸಾಕ್ಷಿ ಹೇಳಿದ್ದಾರೆ . ಈ ದಾವೆ ಸಲ್ಲಿಸಲು ನನಗೆ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ . ನಾನು ಹೇಳುವಂತೆ ಪ್ರತಿವಾದಿಗಳು ನಮ್ಮ ಸ್ವತ್ತನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ . ದಾವೆಗಾಗಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ .

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

Sd/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .